# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 305 | Pages. 2 | Date: 29-10-2025, WEDNESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 305 – ಪುಟಗಳು : 2 29-10-2025 ಬುಧವಾರ | Ph: 8762954248 | ದರ : ₹1


# ಸ್ವಚ್ಛ ಪರಿಸರ ನಿಜವಾದ ಆಸ್ತಿ

## ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ನರೇಂದ್ರಸ್ವಾಮಿ ಪ್ರತಿಪಾದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ವಚ್ಛ ಪರಿಸರ ನಮ್ಮೆಲ್ಲರ ನಿಜವಾದ ಆಸ್ತಿ, ಪರಿಸರ ಸಂರಕ್ಷಣೆಗಾಗಿ ಪ್ರಾಮಾಣಿಕ ಪ್ರಯತ್ನದ ಮೂಲಕ ಸುಸ್ಥಿರ ಸಮಾಜ ಉಳಿವಿಗೆ ಪಣ ತೋಡೋಣ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದ್ದಾರೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಂಸ್ಥಾಪನೆಗೊಂಡು 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಸಹಯೋಗದಲ್ಲಿ ಮಂಗಳವಾರ ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿ, ಕರೊನಾ ಸಂದರ್ಭದಲ್ಲಿ ಆಮ್ಲಜನಕದ ಪ್ರಾಮುಖ್ಯತೆ ಜನರಿಗೆ ಅರಿವಾಗಿದೆ, ಆದಾಗ್ಯೂ ಜನರು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ, ಕಾರ್ಖಾನೆಗಳು, ಕೈಗಾರಿಕೆಗಳು ಕಲುಷಿತ ನೀರನ್ನು ನದಿಗಳಿಗೆ ಬಿಡುವುದರಿಂದಲೂ ಆಗುತ್ತಿರುವ ಜಲ ಮಾಲಿನ್ಯದ ಬಗ್ಗೆ ಎಲ್ಲರೂ ಎಚ್ಚರ ವಹಿಸಬೇಕು ಎಂದರು.

ಜನರ ಜೀವನಶೈಲಿ ಬದಲಾದಂತೆ ಪ್ರತಿ ಹಂತದಲ್ಲಿ ಕೂಡ ರಾಸಾಯನಿಕಗಳ ಬಳಕೆ ಕಡೆಗೆ ವಾಲುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಪರಿಸರ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಹಲವು ವರ್ಷಗಳ ಹಿಂದೆಯೇ ಪರಿಸರ ರಕ್ಷಣೆಗಾಗಿ ಅರಣ್ಯ ಸಂರಕ್ಷಣೆ ಕಾಯ್ದೆ, ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆ, ರಾಷ್ಟ್ರೀಯ ಅರಣ್ಯ ನೀತಿ, ಪರಿಸರ ನೀತಿ, ಹಲವು ಕಾಯ್ದೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ, ದಿನಬಳಕೆ ವಸ್ತುಗಳಲ್ಲಿ ಟನ್‌ಗಟ್ಟಲೆ ಪ್ಲಾಸ್ಟಿಕ್ ಭೂಮಿ ಸೇರುತ್ತಿದೆ. ಇದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕೆಲಸಗಳು ಆಗಬೇಕಿದೆ. ಪರಿಸರ ಸಂರಕ್ಷಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವವರನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರ ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ ಎಂದರು.

### ನಿತ್ಯ 6500 ವಾಹನಗಳ ನೋಂದಣಿ

ಶಾಸಕ ದಿನೇಶ್ ಗೂಳಿಗೌಡ ಮಾತನಾಡಿ, ಪರಿಸರ ಸಮತೋಲನ ಕಾಪಾಡಲು ರಾಜ್ಯದ ಒಟ್ಟು ಭೂ ಪ್ರದೇಶದಲ್ಲಿ ಶೇ.33 ರಷ್ಟು ಅರಣ್ಯ ಪ್ರದೇಶವಿರಬೇಕು ಆದರೆ ಶೇ.20 ರಷ್ಟು ಅರಣ್ಯ ಪ್ರದೇಶವಿದ್ದು, ಇನ್ನೂ 13 ರಷ್ಟು ಅರಣ್ಯ ಪ್ರದೇಶದ ಕೊರತೆ ಇದೆ ಎಂದರು.




> ಪರಿಸರ ಸಂರಕ್ಷಣೆಗಾಗಿ ಗಿಡ ಮರಗಳನ್ನು ಬೆಳೆಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು. ಪರಿಸರ ಸಂರಕ್ಷಣೆಗೆ ಜಾಗೃತಿ ಮೂಡಿಸಲು ದಿಟ್ಟ ಹೆಜ್ಜೆಯಿಟ್ಟಿರುವ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಾವೆಲ್ಲರೂ ಕೈ ಜೋಡಿಸೋಣ.
>
> **– ಶ್ರೇಯಸ್ ಪಟೇಲ್, ಸಂಸದ**

ದೇಶದಲ್ಲಿ ಪ್ರತಿದಿನ 6500 ವಾಹನಗಳು ನೋಂದಣಿ ಆಗುತ್ತಿವೆ. ದಿನೇ ದಿನೇ ವಾಯು ಮಾಲಿನ್ಯ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಸಮೂಹ ಸಾರಿಗೆ ಬಳಕೆಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ಆಹಾರ ಉತ್ಪಾದನೆಗಾಗಿ ಕೃಷಿ ಚಟುವಟಿಕೆಯಲ್ಲಿ ಹೆಚ್ಚಿನ ರಾಸಾಯನಿಕಗಳನ್ನು ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ ಉತ್ತೇಜನ ನೀಡಬೇಕು. ವಿದ್ಯಾರ್ಥಿಗಳು ಹಸಿರು ರಾಯಭಾರಿಗಳಾಗಬೇಕು ಎಂದು ಸಲಹೆ ನೀಡಿದರು. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶೃಂಗೇರಿ ಶಾಸಕ ಬಿ.ಡಿ.ರಾಜೇಗೌಡ ಮಾತನಾಡಿ, ಬಹಳ ದೂರದೃಷ್ಟಿ ಹೊಂದಿದ್ದ ಉಕ್ಕಿನ ಮಹಿಳೆ ಇಂದಿರಾ ಗಾಂಧಿ ಅವರು ಈ ಸಂಸ್ಥೆಯನ್ನು ಹುಟ್ಟು ಹಾಕಿದರು. ಜಲ ವಾಯು ಪರಿಸರವನ್ನು ಉತ್ತಮವಾಗಿ ಇಟ್ಟುಕೊಳ್ಳುವುದೇ ಈ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ ಎಂದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ವಿದ್ಯಾರ್ಥಿಗಳಿಗೆ ಪರಿಸರದ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದು ಅಗತ್ಯವಿದೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು ಕೈ ಚೀಲ ಬಳಕೆಯನ್ನು ಚಾಲ್ತಿಗೆ ತರಬೇಕು. ವಿದ್ಯಾರ್ಥಿಗಳು ಈ ದೇಶದ ಭವಿಷ್ಯದ ಸಂಪತ್ತು. ನೀವು ಮನಸ್ಸು ಮಾಡಿದರೆ ಪರಿಸರ ಉಳಿಸಿ ಮುಂದಿನ ಪೀಳಿಗಗೆ ಉತ್ತಮ ಪರಿಸರ ಕೊಡುಗೆ ನೀಡಬಹುದಾಗಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಪರಿಸರ ಹಾಳಾಗುತ್ತಿರುವುದನ್ನು ಬಹಳ ಗಂಭೀರವಾಗಿ ಯೋಚಿಸಬೇಕು. ಜಲ, ವಾಯು ಮಾಲಿನ್ಯ ತಡೆಗಟ್ಟುವುದು ಹಾಗೂ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಗಾರಿಕೆ, ನಾಗರಿಕ ಕರ್ತವ್ಯ ಪ್ರಜ್ಞೆ ಇರಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್ .ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

# ನಿರಂತರ ಮಳೆಗೆ ಕುಸಿದ ಮನೆ ಗೋಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬ್ಯಾಕರವಳ್ಳಿ ಗ್ರಾ.ಪಂ ವ್ಯಾಪ್ತಿಯ ಸುಳ್ಳಕ್ಕಿ ಗ್ರಾಮದ ಸಮೀಪದ ಬೇಡರ ಜಗಲಿ ಲೋಕೇಶ್ ಎಂಬುವರ ಮನೆಯ ಒಂದು ಭಾಗದ ಗೋಡೆ ಕಳೆದ ನಾಲ್ಕೈದು ತಿಂಗಳುಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮಂಗಳವಾರ ಬೆಳಿಗ್ಗೆ 7.45ರ ಸಮಯದಲ್ಲಿ ಕುಸಿದು ಹಾನಿ ಸಂಭವಿಸಿದೆ. ಈ ಸಂದರ್ಭದಲ್ಲಿ ಮನೆಯ ಪಕ್ಕ ನಿಲ್ಲಿಸಿದ್ದ ಆಟೋ ಮೇಲೆ ಗೋಡೆ ಕುಸಿದಿದ್ದು ಇದರಿಂದ ಆಟೋ ಸಹ ಸಂಪೂರ್ಣವಾಗಿ ಜಖಂಗೊಂಡು ಅಪಾರ ನಷ್ಟ ಸಂಭವಿಸಿರುತ್ತದೆ. ಅದೃಷ್ಟವಷಾತ್ ಮನೆಯಲ್ಲಿದ್ದವರಿಗೆ ಯಾವುದೇ ಅಪಾಯ ಸಂಭವಿಸಿಲ್ಲ. ಕೂಡಲೇ ತಾಲೂಕು ಆಡಳಿತ ಇತ್ತ ಗಮನವರಿಸಿ ಬಡ ಆಟೋ ಚಾಲಕನ ಮನೆಗೆ



ಹಾಗೂ ಜಖಂಗೊಂಡ ಆಟೋಗೆ ಸೂಕ್ತ ಪರಿಹಾರ ಕೊಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಲಾರಿ ಮಗುಚಿ ಬಿದ್ದು ದನಗಾಹಿ ಸಾವು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಸಂತೇಶಿವರ ಗೇಟ್ ಬಳಿ ಇಟ್ಟಿಗೆ ಸಾಗಿಸುತ್ತಿದ್ದ ಲಾರಿ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದ್ದು ದನಗಾಹಿ ಮೃತಪಟ್ಟಿದ್ದಾನೆ. ಲಾರಿ ಕ್ಲೀನರ್ ಗಾಯಗೊಂಡಿರುತ್ತಾನೆ.

ತಾಲ್ಲೂಕಿನ ಸಂತೇಶಿವರ ಗ್ರಾಮದ ಬೋರಯ್ಯ (60) ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿ. ಲಾರಿಯ ಕ್ಲೀನರ್ ಗುರುಮೂರ್ತಿ ಗಾಯಗೊಂಡಿರುವ ವ್ಯಕ್ತಿ.

ಹುಳಿಯಾರ್ ಕೆಂಕೆರೆ ವ್ಯಾಪ್ತಿಯಿಂದ ಸಂತೇಶಿವರ ಗ್ರಾಮಕ್ಕೆ ಲಾರಿಯಲ್ಲಿ ಕೆಂಪು(ನಂಬರ್) ಇಟ್ಟಿಗೆಗಳನ್ನು ಸಾಗಿಸುತ್ತಿದ್ದ ವೇಳೆ ರಸ್ತೆ ಕಡೆಗೆ ವಾಲಿರುವ ಮರದ ಕೊಂಬೆಯನ್ನು ತಪ್ಪಿಸುವ ಸಲುವಾಗಿ ಲಾರಿಯನ್ನು ಚಾಲಕನು ರಸ್ತೆ ಬದಿಗೆ ತಿರುಗಿಸಿದ್ದಾನೆ.

ವೇಗದಲ್ಲಿದ್ದ ಲಾರಿಯೂ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಉರುಳಿ ಬಿದ್ದಿದೆ. ಅಲ್ಲಿಗೆ ರಸ್ತೆ ಬದಿಯಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ಬೋರಯ್ಯ ಲಾರಿಯ ಕೆಳಭಾಗಕ್ಕೆ ಸಿಲುಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಘಟನೆ ಸಂಭವಿಸುತ್ತಿದ್ದಂತೆಯೇ ಲಾರಿ ಚಾಲಕ ಅಲ್ಲಿಂದ ಪರಾರಿಯಾಗಿದ್ದಾನೆ. ಆದರೆ ವ್ಯಕ್ತಿ ಸಿಲುಕಿರುವುದನ್ನು ನೋಡಲು ಬಂದ ಕ್ಲೀನರ್ ಗುರುಮೂರ್ತಿ ಇಟ್ಟಿಗೆ ನಡುವೆ ಕಾಲುಗಳು ಸಿಲುಕಿಕೊಂಡು ಗಾಯಗೊಂಡಿದ್ದಾನೆ.

ತಕ್ಷಣ ಸ್ಥಳೀಯರು ಕ್ರೇನ್ ಮೂಲಕ ಲಾರಿಯನ್ನು ಮೇಲೆತ್ತಿ ಬೋರಯ್ಯ ಅವರ ಮೃತ ದೇಹವನ್ನು ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದ್ದು ಗಾಯಗೊಂಡಿರುವ ಗುರುಮೂರ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ನುಗ್ಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉದ್ದೇಶಿತ ವಿಮಾನ ನಿಲ್ದಾಣ ಸುತ್ತ ರಸ್ತೆ ನಿರ್ಮಾಣಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಬೂವನಹಳ್ಳಿ ಸಮೀಪ ಉದ್ದೇಶಿತ ವಿಮಾನ ನಿಲ್ದಾಣದ ಸುತ್ತ ನಿರ್ಮಿಸಲಾಗಿರುವ ಕಾಂಪೌಂಡ್ ಹೊರಗೆ ಕನಿಷ್ಠ 30 ಅಡಿ ರಸ್ತೆ ನಿರ್ಮಿಸಿಕೊಡಲು ಕ್ರಮಕ್ಕೈಗೊಳ್ಳಬೇಕು. 15 ದಿನಗಳ ಒಳಗೆ ರಸ್ತೆ ನಿರ್ಮಿಸದಿದ್ದರೆ ಸ್ಥಳೀಯರು ಸೇರಿ ಕಾಂಪೌಂಡ್ ಬೀಳಿಸಬೇಕಾಗುತ್ತದೆ ಎಂದು ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ವಿಮಾನ ನಿಲ್ದಾಣ ಆಗಬೇಕು ಎಂಬುದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹಲವು ದಶಕಗಳ ಕನಸು. 1980 ರಿಂದ 1994 ಹಾಗೂ 1996ರ ನಂತರ ಹಂತ ಹಂತವಾಗಿ ವಿಮಾನ ನಿಲ್ದಾಣ ರೂಪ ಪಡೆಯುತ್ತಾ ಬಂದಿದೆ. ಆದರೂ ಈವರೆಗೂ ಹಾರುವ ಕನಸು ನನಸಾಗಿಯೇ ಇಲ್ಲ ಎಂದು ಬೇಸರ ಹೊರ ಹಾಕಿದರು.

ದೇವೇಗೌಡರು ಅಧಿಕಾರದಲ್ಲಿದ್ದಾಗಲೂ, ಇಲ್ಲದಾಗಲೂ ಈ ಯೋಜನೆ ಪ್ರಸ್ತಾಪ ಬಿಡಲಿಲ್ಲ. ಭಾರತೀಯ ವಿಮಾನ




ನಿಲ್ದಾಣ ಪ್ರಾಧಿಕಾರ ಹೆಚ್ಚುವರಿ ಭೂಮಿ ಕೇಳಿದ ಬಳಿಕ ಜಿಲ್ಲಾಡಳಿತ 536 ಎಕರೆ ಜಮೀನು ಸ್ವಾಧೀನಪಡಿಸಿತು. ಸರ್ಕಾರ ನೀಡಿದ ಜಾಗದ ಸುತ್ತ ಎತ್ತರದ ಗೋಡೆ ಮತ್ತು ಮುಳ್ಳಿನ ತಂತಿಯ ಸರಪಳಿಯನ್ನೂ ನಿರ್ಮಿಸಲಾಗಿದೆ.

ಆದರೆ ಕೆಲಸ ಮುಗಿದು ವರ್ಷಗಳೇ ಕಳೆದರೂ, ವಿಮಾನಗಳ ಹಾರಾಟ ಕಾಣಿಸಲಿಲ್ಲ. ದ್ಯಾವಲಾಪುರ, ಮೈಲನಹಳ್ಳಿ, ತೆಂಡೆಹಳ್ಳಿ, ಲಕ್ಷ್ಮೀಸಾಗರ, ಬೂವನಹಳ್ಳಿ ರೈತರು ಪ್ರತಿದಿನ ಕಷ್ಟ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಕಾಂಪೌಂಡ್ ಗೋಡೆಗಳು ಮನೆಗಳ ಅಂಗಳದವರೆಗೂ ಬಂದಿವೆ. ರೈತರು ತಮ್ಮ ಹೊಲಗಳಿಗೆ ಹೋಗುತ್ತಿದ್ದ ಕಾಲುದಾರಿ, ಬಂಡಿದಾರಿ ಬಂದ್ ಆಗಿವೆ. ದ್ಯಾವಲಾಪುರ ಮತ್ತು ಬೂವನಹಳ್ಳಿ ನಡುವಿನ ರಸ್ತೆ ಕೂಡ ಬಂದ್ ಆದರೆ ಸುತ್ತಮುತ್ತಲಿನ ಗಾಡೇನಹಳ್ಳಿ, ಮೆಳಗೋಡು, ಚೌರಿ ಕೊಪ್ಪಲು, ಚಟ್ಟನಹಳ್ಳಿ ಹಳ್ಳಿಗಳ ಜನರಿಗೆ ಹಾಸನ ನಗರಕ್ಕೆ ಬರುವುದು ಕಷ್ಟವಾಗುತ್ತದೆ ಎಂದರು. ಮೈಲನಹಳ್ಳಿಯ ನೀರಿನ ಕಟ್ಟೆ ಮೂಲೆಯನ್ನು ಪ್ರಾಧಿಕಾರ ಕಬಳಿಸಿ ಗೋಡೆ ಕಟ್ಟಿದ ಪರಿಣಾಮ ನೀರಿನ ಸಂಚಾರವೇ ನಿಂತು, ರೈತರು ಬೆಳೆಗೆ ನೀರಿಲ್ಲದಂತಾಗಿದೆ. ದ್ಯಾವಲಾಪುರದ ರೈತರು ತಮ್ಮ ಹೊಲಗಳಿಗೆ ಹೋಗಲು ಮಳೆ ನೀರಿನ ಗುಂಡಿಯ ಕಾಲುವೆಯಲ್ಲಿ ಬಗ್ಗಿ ತೆವಳುತ್ತಾ ಹೋಗಬೇಕಾಗಿದೆ. ದನಕರು ಸಹ ಆ ಗುಂಡಿಯಲ್ಲಿ ಬೆನ್ನು ಬಗ್ಗಿಸಿ ನುಸುಳುವಂತಾಗಿದೆ. ಹಿಂದಿನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರು ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ಪರ್ಯಾಯ ರಸ್ತೆ ನಿರ್ಮಾಣ ಅಗತ್ಯವಿದ್ದು, ದಾರಿ ಬಿಡಬೇಕು ಎಂದು ಸೂಚಿಸಿದ್ದರೂ, ಏರ್ ಪೋರ್ಟ್ ಅಧಿಕಾರಿಗಳು ಕಿವಿಗೊಟ್ಟಿಲ್ಲ ಎಂದು ಆಕ್ರೋಶ ಹೊರಹಾಕಿದರು.

ರೈತರು ಸರ್ಕಾರ ಮತ್ತು ಜಿಲ್ಲಾಡಳಿತದ ಮುಂದೆ 3 ಸ್ಪಷ್ಟ ಬೇಡಿಕೆ ಇಟ್ಟಿದ್ದಾರೆ. ವಿಮಾನ ನಿಲ್ದಾಣ ಕಾಂಪೌಂಡ್ ಹೊರಭಾಗದಲ್ಲಿ ಕನಿಷ್ಠ 30 ಅಡಿ ಅಗಲದ ರಸ್ತೆ ನಿರ್ಮಿಸಬೇಕು. 15 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ, ಸ್ಥಳೀಯರ ಸಹಕಾರದಿಂದ ನಮ್ಮ ಹಕ್ಕಿನ ದಾರಿಯಲ್ಲಿ ನಿರ್ಮಿಸಲಾದ ಗೋಡೆಗಳನ್ನು ಒಡೆದು ಹಾಕಬೇಕಾಗುತ್ತದೆ. ಬೆಳೆ ನಷ್ಟ ಅನುಭವಿಸಿದ ರೈತರಿಗೆ ತಕ್ಷಣ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಗ್ರಾಮಸ್ಥರಾದ ಪ್ರಮೀಳಾ, ನಾಗರಾಜು, ಹೊನ್ನೇಗೌಡ, ಜಯಲಕ್ಷ್ಮಿ, ಶಂಕರ್ ಮೊದಲಾದವರಿದ್ದರು.

# ಅರ್ಥಪೂರ್ಣ ಕನ್ನಡ ರಾಜ್ಯೋತ್ಸವಕ್ಕೆ ಶಾಸಕ ಸಿಮೆಂಟ್ ಮಂಜು ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕನ್ನಡ ನಾಡು-ನುಡಿ ಹಾಗೂ ನೆಲ-ಜಲದ ಗೌರವ ಹೆಚ್ಚಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಾಡು-ನುಡಿ, ಜಲ-ನೆಲ ರಕ್ಷಣೆಯ ಜತೆಗೆ ಕರ್ನಾಟಕದ ಭವ್ಯ ಸಂಸ್ಕೃತಿ, ಪರಂಪರೆ, ಇತಿಹಾಸ ಸ್ಮರಿಸಿ ಅದನ್ನು ಉಳಿಸಿಕೊಂಡು ನಾಡು ಕಟ್ಟುವ ಸಂಕಲ್ಪ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅರ್ಥಪೂರ್ಣ ರಾಜ್ಯೋತ್ಸವಕ್ಕೆ ಕನ್ನಡಪರ ಸಂಘಟನೆಗಳ, ಸಾರ್ವಜನಿಕರ ಹೆಚ್ಚಿನ ಸಹಕಾರ ಕೋರಿದ ಶಾಸಕರು ಅಂದಿನ ಕಾರ್ಯಕ್ರಮದಲ್ಲಿ ತಾಲೂಕಿನ ಎಲ್ಲಾ ನೌಕರರುಗಳು ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸಲು



ತಹಸಿಲ್ದಾರ್ ಅವರಿಗೆ ಸೂಚನೆ ನೀಡಿದರು. ಕಳೆದ ಹಲವು ವರ್ಷಗಳಲ್ಲಿ ಸಾಧಕರನ್ನು ಸನ್ಮಾನಿಸುವಲ್ಲಿ ಗೊಂದಲ ಉಂಟಾಗಿದೆ ಎಂಬ ಸಾರ್ವಜನಿಕರ ದೂರಿಗೆ ಪ್ರತಿಕ್ರಿಯಿಸಿದ ಶಾಸಕರು ಇದನ್ನು ಸರಿಪಡಿಸಲಾಗುವುದು. ಕಲೆ, ಕ್ರೀಡೆ, ರಕ್ಷಣೆ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರ ಸೇರಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಗುವುದು ಎಂದರು.

ಎಲ್ಲೆಡೆ ಕನ್ನಡಧ್ವಜ ರಾರಾಜಿಸಬೇಕು. ಕಚೇರಿಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಬೇಕು ಎಂದರು.

ಕಾರ್ಯಕ್ರಮವನ್ನು ಪಟ್ಟಣದ ಸುಭಾಷ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಬೇಕಾದ ಶೌಚಾಲಯ, ವಿದ್ಯುತ್, ಸ್ವಚ್ಛತೆ ಸೇರಿದಂತೆ ಅಗತ್ಯ ಕ್ರಮದ ಕೈಗೊಳ್ಳುವಂತೆ ಪುರಸಭೆ ಅಧಿಕಾರಿಗಳಿಗೆ ಸೂಚಿಸಿದರು. ಭಾಗವಹಿಸುವ ಎಲ್ಲಾ ಮಕ್ಕಳಿಗೂ ಶುದ್ಧ ಕುಡಿಯುವ ನೀರು ಹಾಗೂ ಬೆಳಿಗಿನ ಉಪಹಾರದ ವ್ಯವಸ್ಥೆಗೆ ತೀರ್ಮಾನ ಕೈಗೊಳ್ಳಲಾಗಿದೆ. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದ ನಂತರ ಕನ್ನಡ ನಾಡು, ನುಡಿ, ಸಂಸ್ಕೃತಿ ಬಿಂಬಿಸುವ ಸ್ತಬ್ಧ ಚಿತ್ರ ಗಳನ್ನು

ಹಾಗೂ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ಪಟ್ಟಣದಲ್ಲಿ ಮೆರವಣಿಗೆ ಮಾಡಲಾಗುವುದು ಎಂದರು.

ತಹಸೀಲ್ದಾರ್ ಸುಪ್ರಿಯ ಕೆ.ಎಸ್ .ಅಧ್ಯಕ್ಷತೆ ವಹಿಸಿದರು. ತಾ.ಪಂ. ಸಹಾಯಕ ನಿರ್ದೇಶಕ ಆದಿತ್ಯ, ಬಿಇಒ ಪುಷ್ಪ, ಆರ್ ಎಫ್‌ಒ ಹೇಮಂತ್, ಸೆಸ್ಕ್ ಇಇ ಹರೀಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಮ್ಮಣ್ಣ ಶೆಟ್ಟಿ, ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಪ್ರಾಂಶುಪಾಲ ರಮೇಶ್,

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದಾ ಗುರುಮೂರ್ತಿ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷರುಗಳಾದ ಗಗನ್ ಗೌಡ, ರಮೇಶ್ ಪೂಜಾರಿ , ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಜಾನೇಕೆರೆ ಸಾಗರ್ ಉಪಸ್ಥಿತರಿದ್ದರು

# ಸಿ ಅಂಡ್ ಆರ್ ನಿಯಮಗಳ ವಿರುದ್ಧ ಶಿಕ್ಷಕರ ಸಂಘದ ಆಕ್ಷೇಪ: ಮರು ಪರಿಶೀಲನೆಗೆ ಆಗ್ರಹ



ಸಕಲೇಶಪುರ: ಸರ್ಕಾರ ಪ್ರಕಟಿಸಿರುವ ಸಿ ಅಂಡ್ ಆರ್ ಕರುಡು ನಿಯಮಗಳ ವಿರುದ್ಧ ಶಿಕ್ಷಕರ ಸಂಘವು ಆಕ್ಷೇಪಣೆ ಸಲ್ಲಿಸಿದ್ದು, ಸರ್ಕಾರವು ಈ ನಿಯಮಗಳನ್ನು ಮರುಪರಿಶೀಲಿಸಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ದೊರೇಶ್ ಎಂ.ಎಸ್. ಒತ್ತಾಯಿಸಿದರು. ಪಟ್ಟಣದ ಅಂಚೆ ಇಲಾಖೆ ಮುಂಭಾಗದಲ್ಲಿ ಪತ್ರ ಚಳುವಳಿಗೆ ಚಾಲನೆ ನೀಡಿ ನಂತರ ಮಾತನಾಡಿ, ಸರ್ಕಾರ ಅಕ್ಟೋಬರ್ 16ರಂದು ಸಿ ಅಂಡ್ ಆರ್ ಕರುಡು ನಿಯಮಗಳ ಪ್ರಕಟಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಎಲ್ಲಾ ಶಿಕ್ಷಕರ ಸಮ್ಮುಖದಲ್ಲಿ ಆಕ್ಷೇಪಣಾ ಪತ್ರವನ್ನು ಸಲ್ಲಿಸುತ್ತಿದ್ದೇವೆ. ಈ ಪತ್ರವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಶ್ಮಿ ಅವರಿಗೆ ಕಳುಹಿಸಲಾಗುತ್ತಿದೆ ಎಂದು ಹೇಳಿದರು. 2016ರೊಳಗೆ ನೇಮಕಗೊಂಡ ಶಿಕ್ಷಕರಿಗೆ 2017ರಲ್ಲಿ ಜಾರಿಗೆ ತಂದ ಸಿ ಅಂಡ್ ಆರ್ ನಿಯಮಗಳನ್ನು ಅನ್ವಯಗೊಳಿಸುವುದು ಅನ್ಯಾಯ. ಈ ನಿಯಮಗಳನ್ನು ಕೇವಲ 2017 ನಂತರ ನೇಮಕಗೊಂಡ ಶಿಕ್ಷಕರಿಗೆ ಮಾತ್ರ ಅನ್ವಯಿಸಬೇಕು. ರಾಜ್ಯಾದ್ಯಂತ ಸುಮಾರು 1.8 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರು ಈ ಕರುಡು ನಿಯಮಗಳ ವಿರುದ್ಧ ಆಕ್ಷೇಪಣೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.

ಸರ್ಕಾರ ಮತ್ತು ಇಲಾಖೆ ನಮ್ಮ ಮನವಿಗೆ ಸ್ಪಂದಿಸದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟವನ್ನು ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಸವರಾಜು, ಸಿಆರ್‌ಪಿ ತೇಜಸ್, ಸಾವಿತ್ರಿಬಾಯಿ ಸಂಘದ ಅಧ್ಯಕ್ಷೆ ಉಮಾದೇವಿ, ಕಾರ್ಯದರ್ಶಿ ಮಮತಾ ಡಿ., ಪ್ರಕಾಶ್, ಜಗದೀಶಯ್ಯ, ಅನುಪಮಾ, ನಸೀಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಎಸ್‌ಐಆರ್ ವಿರುದ್ಧ ಕಾಂಗ್ರೆಸ್ ಸಹಿ ಸಂಗ್ರಹ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ದೇಶಾದ್ಯಂತ ನಡೆಯುತ್ತಿರುವ ಮತದಾರರ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಖಂಡಿಸಿ ಕಾಂಗ್ರೆಸ್ ವತಿಯಿಂದ ಮಂಗಳವಾರ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮುಖಂಡ ಮುರಳಿ ಮೋಹನ್ ಮಾತನಾಡಿ, ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಸಹಿ ಸಂಗ್ರಹ ಅಭಿಯಾನದ ಮೂಲಕ ಚುನಾವಣಾ ಆಯೋಗದ ಕಣ್ಣು ತೆರೆಸಬೇಕಿದೆ. ಮತದಾನ ಸಂವಿಧಾನದ ಪ್ರಕಾರ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಿದ್ದು, ಅದನ್ನು ಕದಿಯುವ ಪ್ರಯತ್ನ ನಡೆಯುತ್ತಿರುವುದರಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಬಾಬಾಸಾಹೇಬ್ ಅಂಬೇಡ್ಕರ್ ನೀಡಿದ ಮತದಾನದ ಹಕ್ಕನ್ನು ಕೇಂದ್ರದ




ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಿಂಪಡೆಯುವ ಪ್ರಯತ್ನ ಮಾಡುತ್ತಿದೆ. ಇದು ಪ್ರಜಾಪ್ರಭುತ್ವದ ವಿರುದ್ಧದ ಕೃತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ದೇಶದ ಎಲ್ಲೆಡೆ ? ಜಮ್ಮು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ? ಸಹಿ ಸಂಗ್ರಹಣಾ ಅಭಿಯಾನವನ್ನು ನಡೆಸುತ್ತಿದೆ ಎಂದು ಹೇಳಿದರು.

ರಾಜ್ಯಾದ್ಯಂತ ಪ್ರತಿ ಮತಗಟ್ಟೆ ಮಟ್ಟದಲ್ಲಿ ಕನಿಷ್ಠ 200 ರಿಂದ 250 ಸಹಿಗಳನ್ನು ಸಂಗ್ರಹಿಸಿ ಕೆಪಿಸಿಸಿ ಹಾಗೂ ಎಐಸಿಸಿಗೆ ಕಳುಹಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಇದು ದೇಶದ ಪ್ರಜಾಪ್ರಭುತ್ವ ಉಳಿವಿನ ಹೋರಾಟವಾಗಿದೆ.

ಜನಪ್ರತಿನಿಧಿಗಳು ವೋಟಿನ ಮೂಲಕ ಆಯ್ಕೆಯಾಗುತ್ತಾರೆ. ಆದರೆ ಮತ ಕಳ್ಳತನದ ಮೂಲಕ ಅಧಿಕಾರ ಕಾಯ್ದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇಂತಹ ಕ್ರಮಗಳನ್ನು ತಡೆಯಲು ಜನರು ಎಚ್ಚರಿಕೆಯಿಂದಿರಬೇಕು ಎಂದು ಅವರು ಎಚ್ಚರಿಸಿದರು. ಎಚ್.ಎಚ್. ಉದಯ್ ಮಾತನಾಡಿ, ನಮ್ಮ ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳನ್ನು ಚುನಾವಣಾ ಆಯೋಗದ ಮೂಲಕ ಕೇಂದ್ರ ಸರ್ಕಾರ ಹಿಂಪಡೆಯುವಂತ ಕೆಲಸ ಮಾಡುತ್ತಿದೆ. ಇದನ್ನು ವಿರೋಧಿಸುವ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕೆಪಿಸಿಸಿ ಮಾರ್ಗದರ್ಶನದಲ್ಲಿ ಈ ಸಹಿ ಸಂಗ್ರಹಣಾ ಅಭಿಯಾನ ನಡೆಯುತ್ತಿದೆ ಎಂದು ಹೇಳಿದರು. ಪ್ರತಿ ಮತಗಟ್ಟೆ ಮಟ್ಟದಲ್ಲಿ ಕನಿಷ್ಠ ನೂರು ಸಹಿಗಳನ್ನು ಸಂಗ್ರಹಿಸುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಜನರ ಧ್ವನಿಯನ್ನು ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಮತದಾನದ ಹಕ್ಕು ಕಸಿದುಕೊಳ್ಳುವುದಷ್ಟೇ ಅಲ್ಲ, ಸಾಮಾನ್ಯರು, ಬಡವರು ಹಾಗೂ ಹಿಂದುಳಿದ ವರ್ಗದವರಿಗೆ ದೊರಕಬೇಕಾದ ಸೌಲಭ್ಯಗಳನ್ನು ಹಂತ ಹಂತವಾಗಿ ಕಿತ್ತುಕೊಳ್ಳುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ನಾವು ಖಂಡಿಸುತ್ತೇವೆ ಎಂದು ಹೇಳಿದರು. ಜನಸಾಮಾನ್ಯರ ಹಕ್ಕುಗಳಿಗಾಗಿ ಕಾಂಗ್ರೆಸ್ ಪಕ್ಷ ನಿಷ್ಠೆಯಿಂದ ಹೋರಾಟ ಮಾಡುತ್ತಿದ್ದು, ಈ ಸಹಿ ಸಂಗ್ರಹಣೆಯು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆಯ ಘಂಟೆಯಾಗಲಿದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭೈರುಮುಡಿ ಚಂದ್ರು, ಆಲೂರು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪೃಥ್ವಿ, ಪುರಸಭೆ ಮಾಜಿ ಅಧ್ಯಕ್ಷ ಸಯ್ಯದ್ ಮುಫೀಸ್, ಕಾಂಗ್ರೆಸ್ ಮುಖಂಡರಾದ ದೇವರಾಜ್ ಬೈಕೆರೆ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪರ್ವತಯ್ಯ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕೃಷ್ಣೇಗೌಡ, ಕಲ್ಗನೆ ಪ್ರಶಾಂತ್, ಹನೀಫ್ ರಾಯಲ್, ಅನಿಲ್ ವೈ.ಪಿ., ರಾಜೇಗೌಡ, ಆನೆ ಮಹಲ್ ಗ್ರಾಮ ಪಂಚಾಯಿತಿ ಸದಸ್ಯ ತಿಮ್ಮಯ್ಯ ಹಾಜರಿದ್ದರು.

# ಕಾರ್ಮಿಕರಿಗೆ ಕನಿಷ್ಠ ವೇತನ: ಶಾಹೀದ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರಮಿಕ ವರ್ಗ ಕಾರ್ಮಿಕರಿಗೆ ವಿವಿಧ ಸೌಲಭ್ಯ ಜೊತೆಗೆ ಕನಿಷ್ಠ ಕೂಲಿ ಒದಗಿಸಿಕೊಡಲು ನಮ್ಮ ಸರ್ಕಾರ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸರ್ಕಾರದ ಕನಿಷ್ಠ ವೇತನ ಮಂಡಳಿ ಸದಸ್ಯ ಶಾಹೀದ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಈಗಾಗಲೇ ರಾಜ್ಯದ 6 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಈ ವೇಳೆ ಕಾರ್ಮಿಕರ ಸಮಸ್ಯೆ ಆಲಿಸಿದ್ದೇನೆ ಎಂದರು.

ರಾಜ್ಯದಲ್ಲಿ ಸುಮಾರು 1.90 ಲಕ್ಷ ಅಸಂಘಟಿತ ಕಾರ್ಮಿಕರಿದ್ದಾರೆ. 50-60 ಸಾವಿರ ನೋಂದಾಯಿತ ಕಾರ್ಮಿಕರಿದ್ದಾರೆ. ಅವರ ಜೀವಕ್ಕೆ ಅಪಾಯ ಆದರೆ ಕೂಡಲೇ ನೆರವು ಕೊಡಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಶ್ರಮಿಸಲಾಗುತ್ತಿದೆ ಎಂದರು.

ದುಡಿಯುವವರಿಗೆ ಕನಿಷ್ಟ ವೇತನ ನಿಗದಿ ಪಡಿಸಿ ಕೊಡದಿದ್ದರೆ ಅಂಥವರ ವಿರುದ್ಧ ಕ್ರಮ ಆಗಲಿದೆ ಎಂದರು.

ಕನಿಷ್ಠ ವೇತನ ನೀಡಿಕೆಯಲ್ಲಿ ದೆಹಲಿ, ಕರ್ನಾಟಕ ಮುಂಚೂಣಿಯಲ್ಲಿವೆ. ಸರ್ಕಾರ ಕಾರ್ಮಿಕರ ಪರ ನಿಲ್ಲಲಿದೆ ಎಂದರು. ಕಾಂಗ್ರೆಸ್ ಪಕ್ಷ ಒಳ್ಳೆಯ ಆಡಳಿತ ನೀಡುತ್ತಿದೆ. ಜನ ಸಾಮಾನ್ಯರ ಮನೆಗೆ ಸರ್ಕಾರ ಹೋಗುತ್ತಿದೆ, ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ-ಜೆಡಿಎಸ್‌ನವರು ಟೀಕಿಸಿದ್ದರು. ಈಗ ಬಿಜೆಪಿ ದೇಶದ ವಿವಿಧೆಡೆ ಇದೇ ಯೋಜನೆ ನಕಲು ಮಾಡುತ್ತಿದೆ ಎಂದು ಟೀಕಿಸಿದರು.

ನಮ್ಮ ಸರ್ಕಾರ ಮಾದರಿ ಕೆಲಸ ಮಾಡುತ್ತಿದೆ. ನಾಡಿನ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿದೆ ಎಂದ ಅವರು ಯಾರು ಏನೇ ಹೇಳಿದರೂ, ನಮ್ಮ ಸರ್ಕಾರ ಸುಭದ್ರವಾಗಿ ಐದು ವರ್ಷ ಅವಧಿ ಪೂರೈಸಿ, ಮುಂದೆಯೂ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

5 ವರ್ಷ ಒಳ್ಳೆಯ ಆಡಳಿತ ಇರಲಿದೆ, ಬಿಜೆಪಿ-ಜೆಡಿಎಸ್ ಅಧಿಕಾರಕ್ಕೆ ಬರಲ್ಲ, ವಿಪಕ್ಷದವರು ಏನಾದರೂ ಸಲಹೆ ನೀಡಿದರೆ ಸ್ವಾಗತ ಮಾಡುತ್ತೇವೆ. ಸರ್ಕಾರ ಬಿದ್ದು ಹೋಗಲಿದೆ ಎಂಬುದು ಊಹಾಪೋಹ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಚೆನ್ನಾಗಿಯೇ ಇದ್ದಾರೆ. ಯಾರೂ ಹಗಲು ಕನಸು ಕಾಣುತ್ತಿದ್ದಾರೆ. ಮೈಸೂರಿನ ಮಾಜಿ ಸಂಸದ ಮಹಿಳೆ ವಿಚಾರದಲ್ಲಿ ನಾಲಿಗೆ ಹರಿಯ ಬಿಡುತ್ತಿರುವುದು ಸರಿಯಲ್ಲ ಎಂದರು.

ಸುದ್ದಿಗೋಷ್ಟಿಯಲ್ಲಿ ದಿನೇಶ್, ಮಂಜುನಾಥ್ ಶರ್ಮಾ ರಾಜೇಶ್, ಶಿವಕುಮಾರ್, ವಕೀಲ ದೇವರಾಜೇಗೌಡ ಇತರರಿದ್ದರು.

# ಮದ್ಯ ವ್ಯಸನಿಗಳ ತಾಣವಾದ ದಿಡಗ ಎಪಿಎಂಸಿ ಆವರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ದಿಡಗ ಗ್ರಾಮದ ಎಪಿಎಂಸಿ ಉಪ ಕೇಂದ್ರದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಹರಾಜು ಕಟ್ಟೆಯು ಮದ್ಯ ವ್ಯಸನಿಗಳ ತಾಣವಾಗಿದ್ದು ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ಮುಜುಗರ ಅನುಭವಿಸುವಂತಾಗಿದೆ.

ಎಪಿಎಂಸಿ ಆವರಣದಲ್ಲಿ ಪ್ರತಿ ಮಂಗಳವಾರ ಸಂತೆ ನಡೆಯುತ್ತದೆ. ಸುತ್ತಮುತ್ತಲಿನ 20ಕ್ಕೂ ಹೆಚ್ಚು ಹಳ್ಳಿಗಳಿಂದ ಜನರು ದಿನಸಿ ಹಾಗೂ ದಿನಬಳಕೆ ಪದಾರ್ಥಗಳನ್ನು ಖರೀದಿಸಲು ಆಗಮಿಸುತ್ತಾರೆ.

ಎಪಿಎಂಸಿ ವತಿಯಿಂದ ಕಳೆದ ವರ್ಷ 80 ಲಕ್ಷ ರೂ. ವೆಚ್ಚದಲ್ಲಿ ಹರಾಜು ಕಟ್ಟೆ, ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡಲಾಗಿದ್ದು ಸಾಕಷ್ಟು ಅಭಿವೃದ್ಧಿಗೊಳಿಸಲಾಗಿದೆ. ಆದರೆ ನಿರ್ಲಕ್ಷ್ಯ ಹಾಗೂ ನಿರ್ವಹಣೆಯ ಕೊರತೆಯ ಪರಿಣಾಮ ಆವರಣವು ಪಾಳು ಬಿದ್ದ ಕೊಂಪೆಯಂತಾಗಿದೆ.



> ಸೂಕ್ತ ನಿರ್ವಹಣೆ ಕೈಗೊಳ್ಳುವಂತೆ ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತರಲಿದ್ದು, ಜತೆಗೆ ಪ್ರತಿದಿನ ಸಂಜೆ ವೇಳೆ ಗಸ್ತು ವ್ಯವಸ್ಥೆ ಮಾಡುವಂತೆ ಪೊಲೀಸ್ ಅಧಿಕಾರಿಗಳಿಗೆ ಮನವಿ ನೀಡಲಾಗುವುದು. ಅಲ್ಲದೆ ನಮ್ಮ ಸಿಬ್ಬಂದಿಯು ಪ್ರತಿದಿನ ಎರಡು ಬಾರಿ ಭೇಟಿ ನೀಡಿ ಗಮನ ಹರಿಸುವುದರ ಜೊತೆಗೆ ಸ್ವಚ್ಛತೆಗೂ ಹೆಚ್ಚಿನ ಆದ್ಯತೆ ನೀಡಲಾಗುವುದು.
>
> **- ಸೋಮಶೇಖರ್,**
> **ಕಾರ್ಯದರ್ಶಿ ಎಪಿಎಂಸಿ, ಚನ್ನರಾಯಪಟ್ಟಣ.**

ದಿಡಗ ಗ್ರಾಮ ಪಂಚಾಯಿತಿಯ ಕೂಗಳತೆ ದೂರದಲ್ಲಿರುವ ಎಪಿಎಂಸಿ ಆವರಣ ವ್ಯಾಪ್ತಿಯಲ್ಲಿ ಸಂಜೆ ನಂತರ ಸಾರ್ವಜನಿಕರ ಸಂಚಾರ ವಿರಳವಾಗಿರುತ್ತದೆ. ಅದರಿಂದ ಮದ್ಯ ವ್ಯಸನಿಗಳು ಅತಿಕ್ರಮಣ ಪ್ರವೇಶ ಮಾಡಿ ಹರಾಜು ಕಟ್ಟೆಯ ಮೇಲೆ ಮಧ್ಯೆ ರಾತ್ರಿಯವರೆಗೂ ಬಿಡು ಬಿಡುತ್ತಾರೆ. ಪರಿಣಾಮ ಎಪಿಎಂಸಿ ಆವರಣವು ಅನೈತಿಕ ಚಟುವಟಿಕೆಗಳ ತಾಣವಾಗಿ ಪರಿಣಮಿಸಿದೆ.

ಹರಾಜು ಕಟ್ಟೆಯ ಉದ್ದಗಲಕ್ಕೂ ಮದ್ಯದ ಬಾಟಲಿ, ಟೆಟ್ರಾ ಪ್ಯಾಕ್, ನೀರಿನ ಬಾಟಲಿ ಹಾಗೂ ಪ್ಲಾಸ್ಟಿಕ್ ಮತ್ತು ಕಾಗದದ ಪದಾರ್ಥಗಳು ಸೇರಿದಂತೆ ಉಳಿದ ಆಹಾರ ಪದಾರ್ಥವು ಚೆಲ್ಲಾಡುತ್ತಿದ್ದು ಸಾರ್ವಜನಿಕರು ಇತ್ತ ಮುಖ ಹಾಕಲು ಅಸಹ್ಯಪಡುವಂತಾಗಿದೆ.

ಇದೇ ಹರಾಜು ಕಟ್ಟೆಯ ಬಳಿ ಮಂಗಳವಾರ ಬೆಳಗ್ಗೆ ಮುಂಜಾನೆಯಿಂದಲೇ ಬೆಣ್ಣೆ ವ್ಯಾಪಾರ ನಡೆಯಲಿದೆ. ಬೆಣ್ಣೆ ವ್ಯಾಪಾರದ ಸಲುವಾಗಿ ಮಹಿಳೆಯರೇ ಹೆಚ್ಚು ಆಗಮಿಸಲಿದ್ದು ಆವರಣದ ಸ್ಥಿತಿ ಕಂಡು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಮದ್ಯ ವ್ಯಸನಿಗಳ ಅಕ್ರಮ ಪ್ರವೇಶಕ್ಕೆ ಕಡಿವಾಣ ಹಾಕುವ ಮೂಲಕ ಎಪಿಎಂಸಿ ಆವರಣದ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂಬುದು ಸಾರ್ವಜನಿಕರ ಮನವಿಯಾಗಿದೆ.

# ಕರ್ತವ್ಯ ಲೋಪ: ಹುಣಸವಳ್ಳಿ ಪಿಡಿಓ ವರ್ಗಾವಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲೆಯ ಆಲೂರು ತಾಲ್ಲೂಕಿನ ಹುಣಸವಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ಲೋಪವೆಸಗಿರುವ ಆರೋಪದಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಎಸ್.ಅಶೋಕ್ ಅವರನ್ನು ಬೇರೆ ಪಂಚಾಯಿತಿಗೆ ವರ್ಗಾವಣೆ ಮಾಡಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಆದೇಶಿಸಿದ್ದಾರೆ.

ಗ್ರಾಮ ಪಂಚಾಯಿತಿ ಗಮನಕ್ಕೆ ಬರದಂತೆ ಹೊಸ ಬಡಾವಣೆಗಳಿಗೆ ಇ-ಸ್ವತ್ತು ವಿತರಿಸುವುದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸೇರಿದಂತೆ, 15ನೇ ಹಣಕಾಸಿನ ಯೋಜನೆ ಕಾಮಗಾರಿಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ತೋರಿರುವುದರಿಂದ ಗ್ರಾಮಗಳಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲವೆಂದು ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ, ಚುನಾಯಿತ ಸದಸ್ಯರು, ಶಾಸಕ ಸಿಮೆಂಟ್ ಮಂಜು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದರು.

ಈ ವರದಿ ಆಧರಿಸಿ ಕೆ.ಎಸ್.ಅಶೋಕ ಅವರನ್ನು ಬೇಲೂರು ತಾಲ್ಲೂಕಿನ ನಾರಾಯಣಪುರ ಗ್ರಾಮ ಪಂಚಾಯಿತಿಗೆ ನಿಯೋಜಿಸಿದೆ ಹಾಗೂ ನಾರಾಯಣಪುರ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹೆಚ್.ವಿ.ಸಹನ ಅವರನ್ನು ಆರೋಗ್ಯ ಸಮಸ್ಯೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಜಿಲ್ಲಾ ಪಂಚಾಯಿತಿ ಕಚೇರಿಯ ಡಿ.ಆರ್.ಡಿ.ಎ ಶಾಖೆಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಿದೆ.

# ಅಸಮರ್ಪಕ ವಿದ್ಯುತ್ ಖಂಡಿಸಿ ಸಾರ್ವಜನಿಕರ ಪ್ರತಿಭಟನೆ



ಚನ್ನರಾಯಪಟ್ಟಣ: ಅಸಮರ್ಪಕ ವಿದ್ಯುತ್ ಸರಬರಾಜು ಖಂಡಿಸಿ ಮಂಗಳವಾರ ತಾಲ್ಲೂಕಿನ ದಿಡಗ ಸೆಸ್ಕ್ ವಿದ್ಯುತ್ ವಿತರಣಾ ಕೇಂದ್ರ, ಶಾಖಾ ಕಚೇರಿಗೆ ಬೀಗ ಹಾಕಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಕಳೆದ ಒಂದು ವಾರದಿಂದ ಬೆಳಗ್ಗೆ 6 ಗಂಟೆಗೆ ವಿದ್ಯುತ್ ಕಡಿತಗೊಳಿಸಿದರೆ ಸಂಜೆ 7 ಗಂಟೆ ಸರಬರಾಜು ಮಾಡುತ್ತಾರೆ. ಕೆಲಮೊಮ್ಮೆ ರಾತ್ರಿಪೂರ್ತಿ ವಿದ್ಯುತ್ ಇರುವುದಿಲ್ಲ. ಈ ಬಗ್ಗೆ ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕೇಳಿದರೆ ಯಾವುದೇ ಸ್ಪಂದನೆ ಇಲ್ಲ ಮತ್ತು ಸಮಸ್ಯೆಯನ್ನು ಪರಿಹರಿಸುತ್ತಿಲ್ಲ ಎಂದು ಸಾರ್ವಜನಿಕರು ದೂರಿದರು.

ದಿಡಗ ಎಫ್ 3 ಮಾರ್ಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಹೆಚ್ಚು ಕಡಿತವಾಗುತ್ತಿದ್ದೆ ಇದನ್ನು ಸರಿಪಡಿಸುತ್ತಿಲ್ಲ. ದಿಡಗ ಗ್ರಾಮದಲ್ಲಿ ಆಸ್ಪತ್ರೆ, ಪೆಟ್ರೋಲ್ ಬಂಕ್, ಹಿಟ್ಟಿಣ ಗಿರಣಿ, ಸಾಮಿಲ್, ಹೋಟೆಲ್ ಅಂಗಡಿ ಮುಂಗಟ್ಟುಗಳು ಸೇರಿದಂತೆ ವಾಣಿಜ್ಯದ ಉದ್ಯಮಗಳು ಇವೆ. ಇವುಗಳಿಂದ ತಿಂಗಳಿಗೆ ಸಾವಿರಾರು ರೂಪಾಯಿಗಳ ವಿದ್ಯುತ್ ದರವನ್ನು (ಬಿಲ್) ಕಟ್ಟುತ್ತೇವೆ ಆದರೂ ಹಗಲು, ರಾತ್ರಿ ಎಲ್ಲಾ ಸಮಯದಲ್ಲೂ ಗಂಟೆಗಟ್ಟಲೇ ವಿದ್ಯುತ್ ಸರಬರಾಜಿನಲ್ಲಿ ಕಡಿತವಾಗುತ್ತಿದ್ದೆ. ಸಿಬ್ಬಂದಿ ಕೇಳಿದರೆ, ವಿದ್ಯುತ್ ಮಾರ್ಗದ ದುರಸ್ತಿ ಎಂದು ನೆಪ ಹೇಳುತ್ತಾರೆ ಎಂದು ಸ್ಥಳಕ್ಕೆ ಆಗಮಿಸಿದ ಶಾಖಾಧಿಕಾರಿ ಕೃಷ್ಣರವರ ಮುಂದೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮತ್ತು ದಿಡಗ ಗ್ರಾಮಕ್ಕೆ ಪ್ರತ್ಯೇಕವಾಗಿ ವಿದ್ಯುತ್ ಮಾರ್ಗವವನ್ನು ಮಾಡಿ, ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವಂತೆ ಒತ್ತಾಯಿಸಿದರು.

ಶಾಖಾಧಿಕಾರಿ ಉತ್ತರಿಸಿ, ಮುಂದಿನ ಸೋಮವಾರ ಶಾಖಾ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂದಕ್ಕೆ ಪಡೆದು, ಕಚೇರಿಯ ಬೀಗವನ್ನು ತೆಗೆದರು.

# ಗ್ರಾಮೀಣ ಪ್ರದೇಶಗಳಲ್ಲಿ ಶಾಂತಿ ಸಭೆಗೆ ನಿರ್ಧಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮಗಳಲ್ಲಿ ಶಾಂತಿ ಮತ್ತು ಸೌಹಾರ್ದ ಸಭೆ ನಡೆಸಲು ವೇಳಾಪಟ್ಟಿ ಸಿದ್ಧಪಡಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಪಿ. ದೂದಫೀರ್ ಅವರಿಗೆ ಸೂಚಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ತ್ರೈಮಾಸಿಕ ಸಭೆಯಲ್ಲಿ ಮಾತನಾಡಿ, ವಿವಿಧ ಇಲಾಖೆಗಳು ಜಂಟಿಯಾಗಿ ಸಭೆ ನಡೆಸುವುದರಿಂದ ಸ್ಥಳೀಯ ಸಮಸ್ಯೆ ಪರಿಹಾರಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಅಪರ ಜಿಲ್ಲಾಧಿಕಾರಿ ವಿ. ಮಂಜುನಾಥ್ ಮಾತನಾಡಿ, ಕಾಡಂಚಿನಲ್ಲಿ ವಾಸವಿರುವ ಹಲಸರು, ಮಲೆರು, ಮಲೈಕುಡಿ ಜನಾಂಗದವರು ಅರಣ್ಯ ಪ್ರದೇಶದಲ್ಲಿ ಕಿರುಉತ್ಪನ್ನ ಸಂಗ್ರಹಿಸಲು ಅವಕಾಶ ಕಲ್ಪಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮವಹಿಸುವಂತೆ ತಿಳಿಸಿದರು.

ಶೆಟ್ಟಿಹಳ್ಳಿ ರಸ್ತೆ ಬದಿಗಳಲ್ಲಿ ಹಳೆಯ ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಅಕ್ರಮವಾಗಿ ದಿನಸಿ ಅಂಗಡಿಗಳಲ್ಲಿಯೂ ಮದ್ಯ ಮಾರಾಟ ಮಾಡುವುದು ಹಾಗೂ ಮದ್ಯದ ಅಂಗಡಿಗಳನ್ನು ನಿಗದಿತ ಸಮಯಕ್ಕಿಂತ ಮೊದಲು ತೆರೆದು ಮಾರಾಟ ಮಾಡುವುದು ಕಂಡು ಬರುತ್ತಿದೆ ಎಂದು ಸಮಿತಿಯ ಸದಸ್ಯರು ಸಭೆಯ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿ ಅವರು ಕ್ರಮ ಕೈಗೊಳ್ಳುವಂತೆ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಸಣ್ಣ ನೀರಾವರಿ ಇಲಾಖೆಯಿಂದ ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ, ಈಗಾಗಲೇ ಭೂ ಮಂಜೂರಾಗಿರುವುದಕ್ಕೆ ಖಾತೆ ಮಾಡಿಕೊಡುವುದು, ಪೌರಕಾರ್ಮಿಕರಿಗೆ ಮನೆ ನಿರ್ಮಿಸಿಕೊಡುವುದು, ಸಿಟಿ ಬಸ್ ಸ್ಟಾಂಡ್ ಬಳಿ ನಗರಸಭೆಯಿಂದ ನಿರ್ಮಾಣ ಮಾಡಿರುವ ಅಂಗಡಿ ಮಳಿಗೆಗಳಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿಡುವಂತೆ, ಆದರ್ಶ ಗ್ರಾಮ ಯೋಜನೆಯಡಿ ವಿದ್ಯುತ್ ದೀಪ ಅಳವಡಿಕೆ, ಕಾಫಿ ಲೈನ್ ಮನೆಗಳಲ್ಲಿ ವಾಸಿಸುವ ಕಾರ್ಮಿಕರಿಗೆ ಗಿರಿಜನ ಉಪಯೋಜನೆಯಡಿ ನಿವೇಶನ ಒದಗಿಸುವುದು, ಗುಡ್ಡೆನಹಳ್ಳಿ ಗ್ರಾಮದಲ್ಲಿ ಕುಲುವಾಡಿಕೆ ಜಮೀನನ್ನು ಇತರೆ ವರ್ಗದವರಿಗೆ ಖಾತೆ ಮಾಡಿಕೊಡದಂತೆ ಕ್ರಮವಹಿಸಲು, ಕಾರ್ಲೇ ಗ್ರಾಮದಲ್ಲಿ ಸ್ಮಶಾನ ಒತ್ತುವರಿ ತೆರವು ಮತ್ತಿತರ ವಿಷಯಗಳ ಕುರಿತು ಸಮಿತಿ ಸದಸ್ಯರಾದ ಮಲ್ಲೇಶ್, ಮರಿಜೋಸೆಫ್, ಶಿವಮ್ಮ, ನವೀನ್ ಸದಾ, ಶಿವಪ್ಪ ನಾಯಕ್ ಚರ್ಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಸಕಲೇಶಪುರ ಉಪವಿಭಾಗಾಧಿಕಾರಿ ರಾಜೇಶ್, ಡಿವೈಎಸ್ಪಿ ಗಂಗಾಧರಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಪಿ. ದೂದ್‌ಫೀರ್ ಇತರರಿದ್ದರು.

# ಪಾಲಿಕೆ ಆಯುಕ್ತ ಕೃಷ್ಣಮೂರ್ತಿಗೆ ಕಡ್ಡಾಯ ರಜೆ ಘೋಷಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತೆ ಹಾಗೂ ಸಾರ್ವಜನಿಕ ವ್ಯವಸ್ಥೆಯಲ್ಲಿ ಗಂಭೀರ ಅಸಮರ್ಪಕತೆ ಕಂಡುಬಂದ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ ಅವರನ್ನು ಕಡ್ಡಾಯ ರಜೆಗೆ ಕಳುಹಿಸಿ ಹಾಸನ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಕ್ರಮ ಕೈಗೊಂಡಿದ್ದಾರೆ.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿ ಹುಣಸಿನಕೆರೆ 80 ಅಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಪರಿವೀಕ್ಷಣೆ ನಡೆಸಿದ ವೇಳೆ, ರಸ್ತೆಯ ಬದಿಗಳಲ್ಲಿ ಮತ್ತು ಹುಣಸಿನಕೆರೆಯ ಸುತ್ತಮುತ್ತ ಕಸದ ರಾಶಿ ಕಣ್ತುಂಬುವಂತಿತ್ತು. ನಗರದ ಅನೇಕ ವಾರ್ಡ್‌ಗಳಲ್ಲಿ ಸ್ವಚ್ಛತೆ ಸಮರ್ಪಕವಾಗಿ ನಿರ್ವಹಣೆ ಆಗದಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ.

ತಕ್ಷಣದಲ್ಲೇ ಆಯುಕ್ತರಿಗೆ ಕಸವನ್ನು ಸ್ವಚ್ಛಗೊಳಿಸಲು ಹಾಗೂ ಸಾರ್ವಜನಿಕರು ರಸ್ತೆ ಬದಿಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆಯದಂತೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು. ಆದರೆ ಆಯುಕ್ತರು ಸಿಬ್ಬಂದಿ ಕೊರತೆಯುಂಟು ಎಂದು ಉಡಾಫೆಯಾಗಿ ಉತ್ತರಿಸಿರುವುದರಿಂದ, ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದ ಧೋರಣೆ ತೋರಿದ್ದಾರೆ ಎಂಬ ಆರೋಪ ಎದುರಾಗಿದೆ.

ಫಲವಾಗಿ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಆಯುಕ್ತ ಆರ್. ಕೃಷ್ಣಮೂರ್ತಿ ಅವರನ್ನು 28 ಅಕ್ಟೋಬರ್ 2025 ರಿಂದ ಕಡ್ಡಾಯ ರಜೆಗೆ ಕಳುಹಿಸಿ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಎಂ. ರಮೇಶ್ ಅವರನ್ನು ತಾತ್ಕಾಲಿಕವಾಗಿ ಹಾಸನ ಮಹಾನಗರ ಪಾಲಿಕೆ ಆಯುಕ್ತರ ಪ್ರಭಾರ ನೀಡುವಂತೆ ಆದೇಶಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-29

1618: ಇಂಗ್ಲೆಂಡ್ ನ ಖ್ಯಾತ ಸಂಶೋಧಕ ಸರ್ ವಾಲ್ಟರ್ ರಾಲಿ ಅವರನ್ನು ದೇಶದ್ರೋಹದ ಆರೋಪದಲ್ಲಿ ಶಿರಚ್ಛೇದ ಮಾಡಲಾಯಿತು.

1863: ಅಂತಾರಾಷ್ಟ್ರೀಯ ಕೆಂಪುಕ್ರಾಸ್ ಸಂಸ್ಥೆ ಸ್ಥಾಪನೆಯಾಯಿತು.

1923: ಟರ್ಕಿ ಗಣರಾಜ್ಯ ಸ್ಥಾಪನೆಗೊಂಡಿತು. ಮುಸ್ತಫಾ ಕೆಮಾಲ್ ಅತಾತರ್ಕ್ ಅವರನ್ನು ಟರ್ಕಿಯ ಮೊದಲ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

1929: ಅಮೆರಿಕಾದ ವಾಲ್ ಸ್ಟ್ರೀಟ್ ಪತನ ವಿಶ್ವದ ಅರ್ಥವ್ಯವಸ್ಥೆ ಕುಸಿದ ದಿನ. ಈ ದಿನವನ್ನು ಕಪ್ಪು ಮಂಗಳವಾರ ಎಂದೂ ಕರೆಯಲಾಗುತ್ತದೆ.

1958: ಸೋವಿಯತ್ ಯೂನಿಯನ್ "ಲೂನಾ 3" ಯಾನದಿಂದ ಚಂದ್ರನ ಹಿಂಭಾಗದ ಚಿತ್ರಗಳನ್ನು ಯಶಸ್ವಿಯಾಗಿ ಕಳುಹಿಸಿತು.

1969: ಇಂಟರ್ ನೆಟ್ ಪರ್ವರೂಪವಾದ ೦ಖಂ೦ಇಖಿ ನಲ್ಲಿ ಮೊದಲ ಸಂದೇಶ ಕಳುಹಿಸಲಾಯಿತು.

2015: ಚೀನಾ ಸರ್ಕಾರ ಒಂದು-ಸಂತಾನ ನೀತಿಯನ್ನು ಅಧಿಕೃತವಾಗಿ ರದ್ದುಪಡಿಸಿತು.

### ಜನನ

1891: ಫಿರೋಜ್ ಗಾಂಧಿ, ಭಾರತೀಯ ರಾಜಕಾರಣಿ ಹಾಗೂ ಇಂದಿರಾ ಗಾಂಧಿಯ ಪತಿ.

1955: ಜೈರ್ ಬೊಲ್ಸೊ ನಾರೋ, ಬ್ರೆಜಿಲ್ ನ ಮಾಜಿ ಅಧ್ಯಕ್ಷ.

# ಸೂಳೆಕೆರೆ ಊರ ಹೆಸರು ಬದಲಿಸಲು ಒಪ್ಪದ ಜೆ.ಹೆಚ್.ಪಟೇಲ್

**- ಆರ್.ಟಿ.ವಿಠ್ಠಲಮೂರ್ತಿ**

'ಸೂಳೆಕೆರೆ' ಎಂಬ ಊರ ಹೆಸರನ್ನು 'ಶಾಂತಿಸಾಗರ' ವೆಂದು ಬದಲಾಯಿಸಲು ಆ ಊರ ಮಂದಿ ಎಲ್ಲ ಬಗೆಯ ರಾಜಕೀಯ ಒತ್ತಡ ತಂದಾಗ, ಆಗ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲರು ಹೆಸರು ಬದಲಾವಣೆಗೆ ಒಪ್ಪಿಗೆ ಕೊಡಲೇ ಇಲ್ಲ.

ಕತ್ತಲು ಮುತ್ತುತ್ತಿದ್ದಂತೆಯೇ ತಂಗಾಳಿ ಆವರಿಸಿಕೊಳ್ಳುತ್ತಾ ಹೋಯಿತು. ನಾನು ಎದುರಿಗಿದ್ದವರ ಮುಂದೆ ಕುಳಿತುಕೊಳ್ಳಲು ಚಡಪಡಿಸುತ್ತಾ, ಆಗಿಂದಾಗ ಮಗ್ಗಲು ಬದಲಿಸುತ್ತಾ, ಕುಳಿತ ಭಂಗಿಯಲ್ಲಿ ದುರಹಂಕಾರದ ಲವಲೇಶವೇನಾದರೂ ಕಾಣುತ್ತಾದಾಷ ಅಂತ ಯೋಚಿಸುತ್ತಿದ್ದೆ. ನಾನು ಆ ಯೋಚನೆಯಲ್ಲಿದ್ದಾಗಲೇ ಅವರು ಮಾತನಾಡತೊಡಗಿದರು. ಅವರ ಹೆಸರು- ಜೆ.ಹೆಚ್.ಪಟೇಲ್!

ಆಗವರು ಮುಖ್ಯಮಂತ್ರಿ. ಬದುಕಿನಲ್ಲಿ ನಾನು ಹಲವಾರು ದಿಗ್ಗಜ ನಾಯಕರನ್ನು ನೋಡಿದ್ದೇನೆ. ಮಾತನಾಡಿದ್ದೇನೆ. ಅವರ ಜತೆ ಕುಳಿತು ಊಟ ಮಾಡಿದ್ದೇನೆ. ಆದರೆ ನೋ ಡೌಟ್, ಎಲ್ಲ ನಾಯಕರಲ್ಲೂ ಒಂದಲ್ಲ, ಒಂದು ವಿಶೇಷ ಗುಣವನ್ನು ನೋಡಿದ್ದೇನೆ.

ಹೀಗಾಗಿ ಯಾವ ನಾಯಕರನ್ನೂ ನಾನು ಯಾರ ಜತೆಗೂ ಹೋಲಿಸುವುದಿಲ್ಲ. ಪಟೇಲರ ವಿಷಯದಲ್ಲೂ ಅಷ್ಟೇ. ಅವರಿಗೆ ಅವರೇ ಸಾಟಿ. ಮತ್ತೊಬ್ಬ ನಾಯಕರನ್ನು ಅವರ ಜತೆ ಹೋಲಿಸಬೇಕೆಂದರೂ ಊಹೂಂ, ನೋ ಚಾನ್ಸ್ .

ಇರಲಿ, ಅವತ್ತು ತಮ್ಮ ಮನೆಯೆದುರು ಪೇರಲೆ(ಸೀಬೆ ಕಾಯಿ) ಗಿಡಗಳಿಂದ ಆವೃತವಾದ ಹುಲ್ಲುಹಾಸಿನ ಮೇಲೆ ಖುರ್ಚಿ ಇಟ್ಟುಕೊಂಡು ಪಟೇಲರು ಲೋಕಾಭಿರಾಮವಾಗಿ ಮಾತನಾಡತೊಡಗಿದರು. ಅಂದ ಹಾಗೆ, ನನಗೆ ಒಂದು ವಿಷಯ ಕೇಳಬೇಕು ಎಂಬ ತರಾತುರಿ ಇತ್ತು. ಯಾಕೆಂದರೆ ಅವತ್ತಷ್ಟೇ ಕನ್ನಡದ ಖ್ಯಾತ ಸಾಹಿತಿ, ಸಂಶೋಧಕರೊಬ್ಬರು, ಪಟೇಲರ ಕ್ಷೇತ್ರ ಚನ್ನಗಿರಿಯ ವ್ಯಾಪ್ತಿಯಲ್ಲಿರುವ ಕಾರಿಗನೂರಿನ ಬಳಿ ಇರುವ ಕೆರೆಯೊಂದರ ಹೆಸರನ್ನು ಬದಲಿಸಬೇಕು ಎಂದು ಪಟ್ಟು ಹಿಡಿದಿದ್ದರು. ಆ ಕೆರೆಯ ಹೆಸರು ಸೂಳೆಕೆರೆ. ಏಷ್ಯಾ ಖಂಡದ ದೊಡ್ಡ ಕೆರೆಗಳಲ್ಲಿ ಒಂದಾದ ಅದರ ಹೆಸರನ್ನು ಶಾಂತಿ ಸಾಗರ ಎಂದು ಬದಲಿಸಬೇಕು ಎಂಬುದು ಅವರ ಒತ್ತಾಯ.

ಆದರೆ ಜಪ್ಪಯ್ಯ ಅಂದರೂ ಪಟೇಲರು ಒಪ್ಪಲಿಲ್ಲ. ಅರೇ, ಇರಲಿ ಬಿಡ್ರಿ. ಸೂಳೆ ಕೆರೆ ಅನ್ನೋ ಹೆಸರು ಕೇಳಲೇ ಚೆಂದ. ಅದರ ಹೆಸರನ್ನು ಶಾಂತಿ ಸಾಗರ ಎಂದು ಬದಲಿಸಿ ಇತಿಹಾಸವನ್ನು ನಾವೇಕೆ ತಿರುಚಬೇಕು ಎಂದವರು ಉಲ್ಟಾ ಹೊಡೆದಿದ್ದರು. ಅರೇ, ಹೌದಲ್ಲಷ ಸೂಳೆಕೆರೆ ಎಂಬ ಹೆಸರನ್ನು ಬದಲಿಸಿ ಶಾಂತಿ ಸಾಗರ ಎಂದು ಹೆಸರಿಟ್ಟರೆ ತಪ್ಪೇನುಷ ಅನ್ನುವುದು ನನ್ನ ಅನಿಸಿಕೆಯೂ ಆಗಿತ್ತು. ಹೀಗಾಗಿ ಸಂಜೆ ಅವರ ಮಾಧ್ಯಮ ಸಲಹೆಗಾರ ಶಂಕರಲಿಂಗಪ್ಪ ಅವರನ್ನು



ಕಾಡಿ ಟೈಮು ಫಿಕ್ಸು ಮಾಡಿಕೊಂಡಿದ್ದೆ.

ಅಯ್ಯೋ, ಇಲ್ಲಮ್ಮಾ, ನಿಮಗೆ ಗೊತ್ತಲ್ಲಷ ಪಟೇಲರು ರಾತ್ರಿಯ ಹೊತ್ತು ಕುಳಿತು ಮಾತನಾಡುವುದಿಲ್ಲ. ಯಾಕೆಂದರೆ ಅವರಿಗೆ ಬೇರೆ ಎಂಗೇಜ್ ಮೆಂಟುಗಳಿರುತ್ತವೆ(ಡ್ರಿಂಕ್ ಪಾರ್ಟಿ) ಅಂತ. ಹೇಗೆ ಕೇಳುವುದಮ್ಮಾ ಎಂದರು ಶಂಕರಲಿಂಗಪ್ಪ, ಆದರೆ ನಾನು ಪಟ್ಟು ಬಿಡದೆ, ಸಾರ್, ನಾನೇನೂ ಗಂಟೆಗಟ್ಟಲೆ ಮಾತನಾಡುವುದಿಲ್ಲ. ಹತ್ತೋ, ಹದಿನೈದು ನಿಮಿಷ ಮಾತ್ರ ಎಂದು ಹೇಳಿ ಯೆಸ್ ಅನ್ನಿಸಿದ್ದೆ.

ಸರಿ, ಪಟೇಲರ ಕಿಕ್ಕಿಂಗ್ ಟೈಮಿನಲ್ಲಿ ನನ್ನ ಆಫ್ ದಿ ರೆಕಾರ್ಡ್ ಇಂಟರ್ ವ್ಯೂಗೆ ಅವಕಾಶ ಸಿಕ್ಕಿತು. ಪಟೇಲರು ಪೇರಲೆ ಗಿಡಗಳಿಂದ ಆವೃತವಾದ ಹುಲ್ಲುಹಾಸಿನ ಮೇಲೆ ಬಂದು ಕೂರಲು ಬಹಳ ಸಮಯ ತೆಗೆದುಕೊಳ್ಳಲಿಲ್ಲ. ಹೀಗಾಗಿ ನನ್ನ ಚಡಪಡಿಕೆಗಳೇನಿವೆ ಎಂಬುದರ ಬಗ್ಗೆ ಗಮನವೇ ಇಲ್ಲದವರಂತೆ ಮಾತನಾಡುತ್ತಾ ಹೋದರು.

ವಿಠ್ಠಲಮೂರ್ತಿ. ನೀವು ರಾಮಾಯಣ, ಮಹಾಭಾರತ ಓದಿರುತ್ತೀರಿ. ಆದರೆ ಬೈಬಲ್, ಖೊರಾನ್ ಓದಿದ್ದೀರಾಷ ಎಂದು ಕೇಳಿದರು. ನಾನು ಎಡಗೈಯಿಂದ ತಲೆಯ ಬಲಭಾಗವನ್ನು ಸವರಿಕೊಂಡು, ಇಲ್ಲ ಸಾರ್. ನಾನೇಕೆ ಬಂದೆ ಎಂದರೆ. ಅಂತ ಮೆಲ್ಲಗೆ ರಾಗ ಎಳೆದೆ.

ಅದಕ್ಕವರು, ನನಗೆ ಗೊತ್ತು. ನೀವು ಏನು ಕೇಳಲು ಬಂದಿದ್ದೀರಿ ಅಂತ. ಆದರೆ ನಾನು ಕೇಳುತ್ತಿರುವುದು ಸಿಂಪಲ್ ಕ್ವಶ್ಚನ್. ನೀವು ಬೈಬಲ್, ಖೊರಾನ್ ಓದಿದ್ದೀರಾಷ ಅಂತ ಯಾಕೆಂದರೆ ನಮ್ಮಲ್ಲಿ ತುಂಬ ಜನರಿಗೆ ಇತಿಹಾಸ ಗೊತ್ತಿರುವುದಿಲ್ಲ. ಹೀಗಾಗಿ ತಮಗೆ ತಿಳಿದಂತೆ ವರ್ತಮಾನವನ್ನು ಅರ್ಥೈಸಿಕೊಂಡು ಮಾತನಾಡುತ್ತಾ ಒಂದು ವಿಕ್ಷಿಪ್ತ ಇತಿಹಾಸವನ್ನು ಸೃಷ್ಟಿಸುತ್ತಾರೆ(ಅರ್ಥವಾಗುವಿಕೆ ಹಾಗೂ ಅರ್ಥವಾಗದೆ ಇರುವಿಕೆ ಎಂಬುದರ ಮಧ್ಯೆ ಇರುವ ಆಪಾರ್ಥವನ್ನು ಕಲ್ಪಿಸಿಕೊಳ್ಳುತ್ತಾರೆ)ಎಂದರು.

ನನಗೆ ದುಸುರಾ ಮಾತನಾಡಲು ಸಾಧ್ಯವೇ ಆಗಲಿಲ್ಲ. ಅವರೇ ವಿಷಾದದಿಂದೆಂಬಂತೆ ನಕ್ಕು ಹೇಳುತ್ತಾ ಹೋದರು. ವಿಠ್ಠಲಮೂರ್ತಿ. ಇದನ್ನೇಕೆ ನಿಮಗೆ ಹೇಳಿದೆ ಎಂದರೆ ನಮ್ಮಲ್ಲಿ ತುಂಬ ಜನರಿಗೆ ಪ್ರವಾದಿ ಮುಹಮ್ಮದರ ಬಗ್ಗೆ, ಅವರ ಹೆಸರನ್ನು ಉಲ್ಲೇಖಿಸುವಾಗ ಅಲ್ಲಾಹು ಅವರ ಮೇಲೆ ಶಾಂತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ ಎಂದು ಹೇಳಬೇಕು ಎಂಬುದು ಗೊತ್ತೇ ಇರುವುದಿಲ್ಲ. ಅವರೇಕೆ ಒಂದು ಕಾಲಘಟ್ಟದಲ್ಲಿ ದೇವರು ನಿರಾಕಾರ ಎಂದರು ಎಂಬುದನ್ನು ನಾವು ಅರ್ಥೈಸಿಕೊಳ್ಳುವ ಗೋಜಿಗೂ ಹೋಗುವುದಿಲ್ಲ. ಅವರ ತಂದೆಯ ಹೆಸರು ಅಬ್ದುಲ್ ಅಂತ, ತಾಯಿಯ ಹೆಸರು ಅಮೀನಾ ಅಂತ, ನಮ್ಮಲ್ಲಿ ಕೃಷ್ಣನನ್ನು ಯಶೋಧೆ ಸಲಹಿದಂತೆ ಮುಹಮ್ಮದರನ್ನು ಸಲಹಿದ ತಾಯಿ ಹಲೀಮಾ ಸಾದಿಯಾ ಅಂತ ತುಂಬ ಜನರಿಗೆ ಗೊತ್ತೂ ಇರುವುದಿಲ್ಲ. ಆದರೆ ಚೆಕ್ ಮಾಡಿ ನೋಡಿ. ನಾವು ನಮಗೆ ಗೊತ್ತೇ ಇರದ ಸಂಗತಿಗಳ ಬಗ್ಗೆ ಅದ್ಭುತವಾಗಿ ಮಾತನಾಡುತ್ತೇವೆ. ಗೊತ್ತಿರುವ ಸಂಗತಿಗಳ ಕುರಿತು ಮಾತೇ ಆಡುವುದಿಲ್ಲ ಎಂದರು.

ಅವರ ಮಾತನ್ನು ನಾನು ಜೀರ್ಣ ಮಾಡಿಕೊಳ್ಳಲು ಯತ್ನಿಸತೊಡಗಿದೆ. ಹೀಗಾಗಿ ಮಾತೇ ಆಡಲಿಲ್ಲ. ಯಥಾ ಪ್ರಕಾರ ಅವರ ಮಾತು ಮುಂದುವರಿಯಿತು. ದೇವರು ನಿರಾಕಾರ ಎಂದು ಮುಹಮ್ಮದರು ಹೇಳಿದ್ದನ್ನೇ, ನಮ್ಮ ಶಂಕರಾಚಾರ್ಯರೂ ಹೇಳಿದ್ದರು. ಆದರೆ ಕಣ್ಣ ಮುಂದೆ ಏನೂ ಕಾಣದೆ ಇದ್ದರೆ ಏನನ್ನು ನಂಬುವುದುಷ ಅಂತ ಕಾಮನ್ ಮ್ಯಾನ್ ಗಲಿಬಿಲಿಗೊಳ್ಳುತ್ತಾನೆ ಎಂಬ ಕಾರಣಕ್ಕಾಗಿ ಶಾರದಾ ದೇವಿಯನ್ನು ಸೃಷ್ಟಿಸಿದರು.

ಯೆಸ್. ನಾನು ದೇವರು ಆಕಾರ, ನಿರಾಕಾರ ಎಂಬ ಕುರಿತು ಮಾತನಾಡುವುದಿಲ್ಲ. ಆದರೆ ಬದುಕಿನ ಪ್ರತಿಯೊಂದು ಸಂಗತಿಗಳ ಕುರಿತೂ ನಾವು ಗೌರವ ಭಾವನೆ ಇರಿಸಿಕೊಳ್ಳಬೇಕು ಎಂಬ ಕಾರಣಕ್ಕಾಗಿ ಇದನ್ನು ಹೇಳಿದೆ.

ನನಗೆ ಮುಸ್ಲಿಂ ಗೆಳೆಯರು ಹೆಚ್ಚು ಎಂಬ ಕಾರಣಕ್ಕಾಗಿ ನಾನು ಇದನ್ನೆಲ್ಲ ನಿಮಗೆ ಹೇಳುತ್ತಿದ್ದೇನೆ ಎಂದುಕೊಳ್ಳಬೇಡಿ. ಬೈಬಲ್ ನ ಹಳೇ ಒಡಂಬಡಿಕೆ, ಹೊಸ ಒಡಂಬಡಿಕೆಯ ಕುರಿತೂ ನಾನು ವಿವರವಾಗಿ ನಿಮಗೆ ಹೇಳಬಲ್ಲೆ. ಆದರೆ ಯಾವ್ಯಾವ ಕಾರಣಕ್ಕಾಗಿ ಮುಹಮ್ಮದರು, ಯೇಸು ಕ್ರಿಸ್ತರು ಹೋರಾಡಿದರು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವ ಬದಲು ಅವರನ್ನು ನಿರ್ದಿಷ್ಟ ಧರ್ಮಕ್ಕೆ ಸೀಮಿತಗೊಳಿಸಿ ಮಾತನಾಡುತ್ತೇವೆ.

ಅವರು ನಿಂತ ನೆಲ ಯಾವುದುಷ ಯಾವ ಪರಿಸ್ಥಿತಿಯನ್ನು ಅವರು ಎದುರಿಸಿದ್ದರು ಎಂಬುದನ್ನು ಮರೆಯುತ್ತೇವೆ. ಅದೇನೇ ಇರಲಿ, ಒಂದಂತೂ ನಿಜ.

ಅವರು ಈ ಪ್ರಕೃತಿ ಸೃಷ್ಟಿಸಿದ ಅಮೂಲ್ಯ ಮುತ್ತುಗಳು ಎಂಬುದನ್ನು ಒಪ್ಪಲೇಬೇಕು. ಸಮುದ್ರ(ಪ್ರಕೃತಿ) ಅಮೂಲ್ಯ ಮುತ್ತುಗಳನ್ನೂ ಸೃಷ್ಟಿಸುತ್ತದೆ. ಕಪ್ಪೆ ಚಿಪ್ಪುಗಳನ್ನೂ ಸೃಷ್ಟಿಸುತ್ತದೆ. ಹಾಗಂತ ನಾವು ಅದನ್ನು ಹೋಲಿಕೆ ಮಾಡಬಾರದು. ಯಾಕೆಂದರೆ ಪ್ರಕೃತಿಯ ದೃಷ್ಟಿಯಲ್ಲಿ ಪ್ರತಿಯೊಂದೂ ಅಮೂಲ್ಯವೇ.

ಈಗ ವಿಷಯಕ್ಕೆ ಬರುತ್ತೇನೆ. ಸೂಳೆಕೆರೆಯ ಹೆಸರನ್ನು ಶಾಂತಿಸಾಗರ ಅಂತ ಬದಲಿಸುವುದರಲ್ಲಿ ತಪ್ಪೇನುಷಅಂತ ತಾನೇ ನೀವು ಯೋಚಿಸುತ್ತಿರುವುದುಷ ಎಂದರು. ಅವರಾಡಿದ ಮಾತು ಕೇಳಿ ನಾನು ವಿಸ್ಮಿತನಾಗಿ, ಹೌದು ಸಾರ್ ಎಂದೆ.

ಅದಕ್ಕವರು, ವಿಠ್ಠಲಮೂರ್ತಿ. ಒಬ್ಬ ಹೆಣ್ಣು ಮಗಳನ್ನು ಸೂಳೆಯ ಪಟ್ಟಕ್ಕೇರಿಸುವುದು ಯಾರುಷ ಈ ಸಮಾಜದ ದುರುಳ ಗಂಡಸರು ಮತ್ತು ಬಾಯಿ ಚಪಲ ಅತಿಯಾಗಿರುವ ಹೆಂಗಸರಲ್ಲವೇಷ ರೈಟ್. ಒಬ್ಬ ಹೆಣ್ಣಿಗೆ ಅದು ಅನಿವಾರ್ಯವಾಗುವಂತೆ ಮಾಡಿದವರು ಯಾರುಷ ಈ ಸಮಾಜ. ಆದರೆ ಈ ಸಮಾಜದ ಕಣ್ಣಲ್ಲಿ ಸೂಳೆ ಎನ್ನಿಸಿಕೊಂಡ ಆ ಹೆಣ್ಣು ಮಗಳು ಕೆರೆ ಕಟ್ಟಿಸುವ ಮೂಲಕ ಲಕ್ಷಾಂತರ ಜನ ನೆಮ್ಮದಿಯಾಗಿ ಅನ್ನ ಉಣ್ಣಲು ದಾರಿ ಮಾಡಿಕೊಟ್ಟಳಲ್ಲವೇಷ ಎಂದರು.

ನಾನು ಮೂಕ ಬಸವಣ್ಣನ ತರ ತಲೆ ಅಲ್ಲಾಡಿಸಿದೆ.

ಅದಕ್ಕವರು, ಲಕ್ಷಾಂತರ ಜನರಿಗೆ ಅನ್ನ ಉಣ್ಣಲು ದಾರಿ ಮಾಡಿಕೊಟ್ಟ ಒಬ್ಬ ಹೆಣ್ಣು ಮಗಳನ್ನು ಸೂಳೆ ಎನ್ನುವ ಸಮಾಜಕ್ಕೆ, ಅಂತಹ ಮಹತ್ವದ ಕೆಲಸ ಮಾಡಲು ಸಾಧ್ಯವಾಗಲಿಲ್ಲ ಎಂದರೆ ಏನರ್ಥಷ ಆಕೆಯ ಮಾನವೀಯತೆಯ ಲೆವೆಲ್ಲಿನಲ್ಲಿ ಈ ಸಮಾಜ ಇಲ್ಲ ಎಂದು ತಾನೇಷ ಹೀಗಾಗಿ ಆಕೆಯನ್ನು ಸೂಳೆ ಎಂದು ಕರೆದ ಸಮಾಜದ ಮನಸ್ಸಿನಲ್ಲಿ ನಾಚಿಕೆ ಎಂಬುದು ಶಾಶ್ವತವಾಗಿ ಉಳಿಯಬೇಕು. ಸೂಳೆ ಎಂದು ಕರೆಸಿಕೊಂಡ ಆ ಹೆಣ್ಣಿನಲ್ಲಿ ಇರುವ ಒಬ್ಬ ತಾಯಿಯನ್ನು ನಾವು ಸದಾ ಕಾಲ ಗುರುತಿಸಬೇಕು ಎಂಬ ಕಾರಣಕ್ಕಾಗಿ ಅದೇ ಹೆಸರು ಇರಲಿ ಎಂದೆನೇ ಹೊರತು, ಬೇರೆ ಯಾವ ಉದ್ದೇಶಕ್ಕೂ ಅಲ್ಲ.

ಇವತ್ತು ನಾವು ಆ ಕೆರೆಯ ಹೆಸರನ್ನು ಶಾಂತಿ ಸಾಗರ ಎಂದು ಕರೆದೆವು ಎಂದಿಟ್ಟುಕೊಳ್ಳಿ. ಮುಂದಿನ ಪೀಳಿಗೆಗೆ ಅದರ ಹಿನ್ನೆಲೆಯೇ ಅರ್ಥವಾಗುವುದಿಲ್ಲ.

ಹೀಗಾಗಿ ಅದು ತಲೆಮಾರುಗಳಿಂದ ತಲೆಮಾರುಗಳಿಗೆ ಅರ್ಥವಾಗುತ್ತಾ ಹೋಗಲಿ. ಒಬ್ಬ ಹೆಣ್ಣು ಮಗಳು ಸೂಳೆ ಅನ್ನಿಸಿಕೊಂಡರೆ ಅದಕ್ಕೆ ಕಾರಣ ಯಾರುಷ ಎಂಬುದು ಅರ್ಥವಾಗಲಿ ಎಂಬ ಕಾರಣಕ್ಕಾಗಿ ಅದೇ ಹೆಸರಿರಲಿ ಎಂದೆ. ತಪ್ಪೇನಾದರೂ ಇದೆ ಅನ್ನಿಸುತ್ತದೆಯಾ ವಿಠ್ಠಲಮೂರ್ತಿಷ ಎಂದರು ಪಟೇಲ್.

ನಾನು ಉತ್ತರ ಕೊಡಲಾಗದಷ್ಟು ಅಸಹಾಯಕ ಸ್ಥಿತಿಯಲ್ಲಿದ್ದೆ. ಅದಕ್ಕವರು ಮೇಲೇಳುತ್ತಾ ಹೇಳಿದರು. ಇದನ್ನೆಲ್ಲ ನಿಮಗೇಕೆ ಹೇಳಿದೆ ಎಂದರೆ ಈ ಸಮಾಜಕ್ಕೆ ಒಬ್ಬ ಹೆಣ್ಣು ಮಗಳು ಯಾಕೆ ಸೂಳೆಯಾದಳುಷ ಎಂಬ ಸಾಮಾನ್ಯ ವಿಷಯವೇ ಅರ್ಥವಾಗುವುದಿಲ್ಲ. ಹೀಗಿರುವಾಗ ರಾಮ, ಕೃಷ್ಣ, ಜೀಸಸ್, ಮಹಮ್ಮದರಂತಹ ಮಹಾನುಭಾವರು ಅರ್ಥವಾಗಲು ಸಾಧ್ಯವೇಷ ಎಂದರು.

ನಾನು ತಣ್ಣಗೆ ಮೇಲೆದ್ದೆ. ಅವರು ಬಲಗಡೆ ಇದ್ದ ಕಾವೇರಿ ಬಂಗಲೆಯ ಕಡೆ ತಿರುಗುತ್ತಾ ಹೇಳಿದರು. ನೀವು ಒಳ್ಳೆಯದನ್ನೇ ಯೋಚಿಸಿ, ಒಳ್ಳೆಯದನ್ನೇ ಮಾಡಲು ಯತ್ನಿಸಿ. ಆ ದಾರಿಯಲ್ಲಿ ನಡೆದಾಗ ನಿಮಗೆ ಇದೆಲ್ಲ ಸ್ವಲ್ಪವಾದರೂ ಅರಿವಾಗಬಹುದು ಎಂದರು. ನಾನು ಮೂಕನಾಗಿದ್ದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248